## ಪದಬಂಧ



ಎಡದಿಂದ ಬಲಕ್ಕೆ

1. ಸಮರದ ಆರಂಭ ಮತ್ತು ದಿನದಾಂತ್ಯಕ್ಕೆ ಕೃಷ್ಣ ಮೊಳಗಿಸಿದ್ದು 4
3. ನಟನಟಿಯರೆಲ್ಲ ರಂಗದ ಮೇಲೆ ಸೇರಿ ಮಾಡಿದ ಪ್ರಸಂಗ 3
4. ಮನಸ್ಸಿಗೆ ನೋವಾಗಿರಬಹುದು, ಆದರೂ ಮಾಯುತ್ತದೆ 3
6. ಬಾಯಲ್ಲಿ ನೀರೂರಿಸುವ ಚೆಂದದ ಅಡುಗೆ 4
7. ಕೊಂಚ ಹಾಕಿದರೂ ಸಾಕು, ಅಡುಗೆಗೆ ರುಚಿ ಮತ್ತು ಪರಿಮಳ 4
8. ಸದಾ ಕಾಡುವ ದುಃಖಭರಿತ ಹಾಡು 4
10. ತೆರಿಗೆ ವಸೂಲಿಗೆ ಬಂದವನಲ್ಲಿ ಎಲ್ಲಿರುತ್ತೆ ಸಹಾನುಭೂತಿ 4
12. ಹರಿಯುವ ಇವೆಲ್ಲವೂ ಸೇರಿದರಷ್ಟೇ ಸಮುದ್ರ 4
14. ಸುದ್ದಿರದ್ದಿಗಳ ವಿಂಗಡಿಸುವ ಸುದ್ದಿಮನೆಯ ಯಜಮಾನ 4
16. ವಾಲಿಯ ಸಹೋದರ ಸ್ವಲ್ಪ ದೀರ್ಘವಾಗಿದ್ದಾನೆ ಅಷ್ಟೆ. 3
17. ಅನುಕೂಲವನ್ನು ವಿವರಿಸುವ ಅನ್ಯ ಭಾಷೆಯ ಪದ, ಹಳ್ಳಿಗರ ಬಾಯಲ್ಲಿ ಹೀಗಾಗಿದೆ. 3
18. ಆಸ್ಪತ್ರೆಯಲ್ಲಿದ್ದ ಮದ್ದೆಲ್ಲ ಮುಗಿದು ಹೋಗಿದೆ. 4

ಮೇಲಿನಿಂದ ಕೆಳಕ್ಕೆ

1. ನಿಮಗೆ ಆತಂಕ ಬೇಡ. ಇವನು ಕೇಳಿದ್ದನ್ನೆಲ್ಲ ಕೊಡುವ ಆಭಯಂಕರ 3
2. ನೋಡನೋಡುತ್ತಲೇ ಆದ ಹತ್ತು ವರ್ಷಗಳ ಸಂಭ್ರಮ 3
5. ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವ ಜಾಗ 3
7. ಅನಗತ್ಯವಾದದ್ದನ್ನೆಲ್ಲ ಖರೀದಿಸುವ ಮನಸ್ಥಿತಿ 4
9. ಏನೆಲ್ಲ ಬರೆಯಬಹುದಾದ ಒಂದಿಷ್ಟು ತೂಕವಿಲ್ಲದ ಕಾಗದ 4
11. ಇಲ್ಲಿ ಕಾಸಿಲ್ಲದೇ ಬೇಕಾದದ್ದನ್ನೆಲ್ಲ ಮಾಡಲು ಸಾಧ್ಯ 3
13. ಗೃಹಸ್ಥ ಬದುಕಿನಲ್ಲಿ ಜವಾಬ್ದಾರಿ ಹೊಂದಿರುವ ಪತಿವ್ರತೆ 4
14. ಮಾತಿಗೆ ಮಾತು ಸೇರಿಸಿದಾಗ ನಡೆಯುವ ಆರೋಗ್ಯಕರ ಚರ್ಚೆ 3
15. ಬ್ರಹ್ಮನ ತಲೆಯೇ ಶಿವನ ಪಾಲಿನ ಭಿಕ್ಷಾಪಾತ್ರೆ 3

### 06–05–2021 ಉತ್ತರಗಳು

ಎಡದಿಂದ ಬಲಕ್ಕೆ

1.ಚಿಂತಾಮಣಿ 3.ಪರಾತ 4.ಸಮಾಸ 6.ಕವಾಡಿಗ 7.ಧಮನಿ 9.ಬಾಹುಜ 11.ತಬರ 13.ಲಿಲಾವು 15.ಪಡಪೋಸಿ 17.ಕುರುಡ 18.ನಿಶ್ಶಂಕೆ 19.ಕಲಾವಿದ

ಮೇಲಿನಿಂದ ಕೆಳಕ್ಕೆ

1.ಚಿಂತಕ 2.ಗಸಣಿ 3.ಪರಮ 5.ಸಲಹು 7.ಧನುರ್ವಾತ 8.ನಿರ್ವಿಕಾರ 9.ಬಾಹುಬಲಿ 10.ಜಡ್ಡು ನೋವು 12.ಬದುಕು 14.ಲಾಲಿಕೆ 15.ಪಡದೆ 16.ಸಿನಿಕ

ಪ್ರಶ್ನಾಂಕಣ

# ಬಾವಲಿಗಳ ಆಹಾರ ಏನು?

ಸಸ್ತನಿ ವರ್ಗಕ್ಕೆ ಸೇರಿದ ಬಾವಲಿಗಳು ನಿಶಾಚರಿಗಳೆಂದೇ ಖ್ಯಾತಿ. ಹಗಲು ನಿದ್ರಿಸಿ ರಾತ್ರಿ ಎಚ್ಚರವಾಗಿರುವ ಬಾವಲಿಗಳ ಮುಂಗಾಲುಗಳು ಜಾಲ ರೆಕ್ಕೆಗಳನ್ನು ರಚಿಸುವ, ಮತ್ತು ಇದರಿಂದ ಇವು ಸಹಜವಾಗಿ ನಿಜವಾದ ಮತ್ತು ಅವಿಶ್ರಾಂತವಾದ ಹಾರಾಟವನ್ನು ನಡೆಸಬಲ್ಲ ವಿಶಿಷ್ಟ ಜೀವಿ. ಸಾಮಾನ್ಯವಾಗಿ ಎತ್ತರೆತ್ತರದ ಮರಗಳಲ್ಲಿ ತಲೆಕೆಳಗಾಗಿ ನೇತಾಡುತ್ತಿರುವ ಇಂತಹ ವಿಚಿತ್ರ ಪಕ್ಷಿ ಜಗತ್ತಿನಲ್ಲಿ ಮತ್ತೊಂದಿಲ್ಲ ಎನ್ನಬಹುದು. ಇನ್ನೊಂದು ವಿಶೇಷ ಎಂದರೆ ಬಾವಲಿಗಳು ಇತರ ಪಕ್ಷಿಗಳಂತೆ ತಮ್ಮ ಇಡೀ ಮುಂಗಾಲುಗಳನ್ನು ಬಡಿಯುವುದಿಲ್ಲ, ಬದಲಾಗಿ ತಮ್ಮ ಹೊರ ಹರಡಿಕೊಂಡ, ಅತಿ ಉದ್ದನೆಯ ಮತ್ತು ತೆಳು ಪೊರೆಯಿಂದ ಆವೃತವಾಗಿರುವ ಬೆರಳುಗಳನ್ನು ಬಡಿಯುತ್ತವೆ. ಇದು ನಮಗೆ ಹಾರಾಡಿದಂತೆ ಗೋಚರವಾಗುತ್ತದೆ ಅಷ್ಟೆ. ಹೆಚ್ಚಾಗಿ ಗುಂಪು ಗುಂಪಾಗಿ ಒಂದೇ ಮರದಲ್ಲಿ ತನ್ನ ಪರಿವಾರದೊಂದಿಗೆ ವಾಸ ಮಾಡುತ್ತವೆ ಬಾವಲಿಗಳು.

ಇವುಗಳ ಆಹಾರಕ್ರಮವೂ ವಿಚಿತ್ರವಾದದ್ದು. ದೊಡ್ಡ ಬಾವಲಿಗಳು ಹಣ್ಣು ಹಾಗೂ ಹೂವಲ್ಲಿನ ಮಕರಂದ ಹೀರಿ ಬದುಕುತ್ತವೆ. ಗಾತ್ರದಲ್ಲಿ ಚಿಕ್ಕದಾಗಿರುವ ಬಾವಲಿಗಳು ಕ್ರಿಮಿಕೀಟ ಹಾಗೂ ಹುಳುಗಳನ್ನು ತಿನ್ನುತ್ತವೆ. ದೊಡ್ಡ ಬಾವಲಿಗಳು 40 ರಿಂದ 150 ಗ್ರಾಂ ತೂಕವಿದ್ದು, ಒಂದೇ ಹಾರುತ್ತಿರುವಾಗ ಹದ್ದಿನಂತೆ ಕಾಣುತ್ತದೆ. ಚಿಕ್ಕ ಬಾವಲಿಗಳು 10 ರಿಂದ 25 ಗ್ರಾಂ ಇರುತ್ತದೆ. ಇದನ್ನು ಕಪಟ, ತೊಲೆಹಕ್ಕಿ ಎಂದೂ ಕರೆಯಲಾಗುತ್ತದೆ.



ದೊಡ್ಡ ಬಾವಲಿಗಳು 30–40 ವರ್ಷ ಬದುಕುತ್ತವೆ ಎನ್ನಲಾಗಿದೆ. ಮರಗಳು ಹೆಚ್ಚಾಗಿದ್ದು, ಹಣ್ಣಿನ ಮರಗಳಿರುವ ಕಡೆ ದೊಡ್ಡ ಬಾವಲಿಗಳು ಇರುತ್ತವೆ. ಅದರಲ್ಲೂ ಬದಲಾವಣೆಗಳಿಗೆ ತಕ್ಕಂತೆ ಮನುಷ್ಯನೊಂದಿಗೆ ಹೊಂದಿಕೊಂಡಿರುವ ಬಾವಲಿಗಳೆಂದರೆ, ಕಪಟ ಹಾಗೂ ಇಂಡಿಯನ್ ಫ್ಲೈಯಿಂಗ್ ಫಾಕ್ಸ್ ಹಾಗೂ ಗಿಡ್ಡ ಮೂಗಿನ ಬಾವಲಿ. ಗಿಡ್ಡ ಮೂಗಿನ ಬಾವಲಿ ಹಾಗೂ ಇಂಡಿಯನ್ ಫ್ಲೈಯಿಂಗ್ ಫಾಕ್ಸ್ ಎರಡೂ, ಹಣ್ಣುಗಳನ್ನು ತಿಂದು ಜೀವಿಸುತ್ತವೆ. ಹೀಗಾಗಿಯೇ ಮರಗಳು ಇರುವ ಕಡೆಗಳಲ್ಲಿ ಸಂಜೆಯಾಗುತ್ತಿದ್ದಂತೆಯೇ ಇವುಗಳ ಹಾರಾಟ ಕಾಣಬಹುದು. ಅತ್ತಿ ಹಣ್ಣು, ಆಲದ ಮರದ ಹಣ್ಣು, ಸೀಬೇಕಾಯಿ, ಗಸಗಸೆ ಹಣ್ಣು ಹಾಗೂ ಕಾಡು ಹಣ್ಣುಗಳು ಇವುಗಳ ಆಹಾರ.

ವಿಶ್ವದಲ್ಲಿ 1017 ಪ್ರಭೇದದ ಬಾವಲಿಗಳಿವೆ. ಭಾರತದಲ್ಲಿ 126, ರಾಜ್ಯದಲ್ಲಿ ಅಂದಾಜು 36 ಪ್ರಭೇದಗಳಿರಬಹುದು ಎಂದು ಅಂದಾಜು ಮಾಡಲಾಗಿದೆ. ಆದರೂ ಬಾವಲಿಗಳಲ್ಲಿ ಇಂತಿಷ್ಟೇ ಪ್ರಭೇದಗಳಿವೆ ಎಂಬುದು ಖಚಿತವಾಗಿ ಹೇಳಲು ಎಲ್ಲೂ ಪುರಾವೆಗಳಿಲ್ಲ. ಕೋಲಾರ ಹಾಗೂ ಬೆಳಗಾವಿಯ ಖಾನಾಪುರದ ಗುಹೆಗಳಲ್ಲಿ ಅತಿ ವಿರಳವಾದ ಪ್ರಭೇದದ ಬಾವಲಿಗಳಿವೆ. ಆದರೆ ಅವುಗಳ ಸಂಖ್ಯೆ 100–150 ಇರಬಹುದು ಅಷ್ಟೆ.ಕೋಲಾರದ ಗುಹೆಯೊಂದರಲ್ಲಿ ಪತ್ತೆಯಾಗಿರುವ ಬಾವಲಿ ಬೇರೆಲ್ಲೂ ಪತ್ತೆಯಾಗಿಲ್ಲ.

■ ಯು.ಎ.